ಶ್ರೀ ಎಂ.ಎಸ್. ಪಾಟೀಲ್.—೧೦ ರೂಪಾಯಿಗಳು ಎಂದು ಇಟ್ಟುಕೊಂಡರೆ ೧೧ ಕೋಟಿ ಯಾಗುತ್ತದೆ. ಗಡಿ ಪ್ರದೇಶ ಅದು. ಮಹಾರಾಷ್ಟ್ರದವರು ಆ ಭಾಗದಲ್ಲಿ ಹೆಚ್ಚು ಹೆಚ್ಚು ಅದು ಕೂಲಗಳನ್ನು ಮಾಡಿಕೊಡುತ್ತಿದ್ದಾರೆ. ಆವರು ಕೇಳುತ್ತಿದ್ದಾರೆ, ನಿಮ್ಮ ಸರ್ಕಾರ ಏನು ಮಾಡುತ್ತಿನ್ನ ಎಂದು ? ಈ ಯೋಜನೆಯನ್ನು ತೆಗೆದುಕೊಳ್ಳುವ ಬಗ್ಗೆ ಸರ್ಕಾರದ ನಿರ್ಧಾರ ಏನೆಂಬುದನ್ನು ಸ್ಪಷ್ಟಪಡಿಸಬೇಕು.

ಶ್ರೀ ಎಂ. ಚಂದ್ರಶೇಖರ್.—ಆವರನ್ನು ಕರೆದು ಅವರ ಜೊತೆಯಲ್ಲಿ ಮಾತನಾಡಿದ್ದೇನೆ. ಪರಿಸ್ಥಿತಿ ಅವರಿಗೂ ಅರ್ಥವಾಗಿದೆ. ಬೋರ್ಡ್ಸ್ ಸ್ಕೀಂ ಯೋಜನೆಯಲ್ಲಿ ಈ ಕೆಲಸವನ್ನು ತೆಗೆದು ಕೊಳ್ಳಲಾಗುವುದು. ಈಗಾಗಲೇ ಯೋಜನಾ ಇಲಾಖೆ ಹಾಗೂ ಆರ್ಥಿಕ ಇಲಾಖೆಯವರ ಜೊತೆ ಯಲ್ಲಿ ಮಾತನಾಡಿ, ಶಿಫಾರಸ್ಸು ಮಾಡಿ ಕಳುಹಿಸಿ ಕೊಡಲಾಗಿದೆ. ಸಧ್ಯದ ಆರ್ಥಿಕ ಸಂಪನ್ಮೂಲಗಳು ಸರಿಸೋಗಿ, ಅವಕಾಶವಾದರೆ ಇದನ್ನು ಪರಿಶೀಲನೆ ಮಾಡಬಹುದು.

ಬಳ್ಳಾರಿ ಜಿಲ್ಲೆಯ ಇನಾಂ ಜಮೀನಾನಂಗಳಂ

೪೨೪ (೨೨೬) ಎಚ್. ನಾಗನಗೌಡ.—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯೆಯಿಟ್ಟು ಉತ್ತರಿಸುವರೇ:—

ಬಳ್ಳಾರಿ ಜಿಲ್ಲೆಯ ಇನಾಂ ಜಮೀನುಗಳು ಹಿಂದಿನ ಮದ್ರಾಸ್ ಪ್ರಾಂತದಲ್ಲದ್ದಾಗಲೀ ಇನಾಂ ರದ್ದು ಮಾಡಿರುವುದರಿಂದ ಇನಾಂ ರದ್ದಿಯಾತಿ ಕಾಯಿದೆಗಳ ಅನ್ವಯ ಫಾರಂ ೧ನ್ನು ಹಾಕುವ ಬಗ್ಗೆ ವಿನಂತಿ ತೋರಿಸುವ ವಿಷಯ ಸರ್ಕಾರದ ಮುಂದಿದೆಯೇ ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು).—

ಬಳ್ಳಾರಿ ಜಿಲ್ಲೆಯ ಎನ್‌ಫ್ರಾನ್‌ಜೈಸಡ್ (ಬಂಧ ವಿಮುಕ್ತಿ) ಇನಾಂ ಜಮೀನುಗಳನ್ನು ರೈತವಾರಿ ಜಮೀನುಗಳೆಂದು ಪರಿಗಣಿಸುವ ಬಗ್ಗೆ ಸಂಬಂಧಪಟ್ಟ ಇನಾಂ ರದ್ದಿಯಾತಿ ಕಾಯಿದೆಗಳಲ್ಲಿ ಒಂದು ವಿಶೇಷ ಅವಕಾಶ ಕಲ್ಪಿಸುವ ವಿಷಯ ಸರಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಚ್. ನಾಗನಗೌಡ.—ಮಾನ್ಯ ಅಧ್ಯಕ್ಷರೇ, ಬಳ್ಳಾರಿ ಜಿಲ್ಲೆ ಹಿಂದೆ ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ್ದಾಗ ಇನಾಂ ರದ್ದಿಯಾತಿ ಕಾಯಿದೆಗಳ ಅನ್ವಯ ಫಾರಂ ೧ ಅನ್ನು ಹಾಕುವ ಬಗ್ಗೆ ವಿನಾಯಿತಿ ತೋರಿಸಿದ್ದರು. ಈಗ ಕರ್ನಾಟಕ ಸರ್ಕಾರದವರು ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಏನು ಹೇಳಿದ್ದಾರೆ ಇದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಇಷ್ಟು ವರ್ಷ ವಾದರೂ ಇದನ್ನು ಇನ್ನೂ ಸರಿಪಡಿಸಿಲ್ಲ. ಆದುದರಿಂದ ಆದಷ್ಟು ಬೇಗನೆ ಇದನ್ನು ಸರಿಪಡಿಸುತ್ತೀರಾ?

ಶ್ರೀ ವಿ. ಎಲ್. ಪಾಟೀಲ್.—ಆದಷ್ಟು ಬೇಗನೆ ಸರಿಪಡಿಸುತ್ತೇನೆ.

ಶ್ರೀ ಕೊಪ್ಪದ್.—ಈ ಇನಾಂ ಜಮೀನುಗಳನ್ನು ರೈತವಾರಿ ಜಮೀನುಗಳೆಂದು ಪರಿಗಣಿಸದೇ ಇರುವುದರಿಂದ ಇದರ ಬಗ್ಗೆ ಆ ರೈತರಿಗೆ ಎಲ್ಲೂ ಸಾಲ ಸಿಕ್ಕುವುದಿಲ್ಲ. ಆದುದರಿಂದ ಕೂಡಲೇ ಇದನ್ನು ರೈತವಾರಿ ಜಮೀನುಗಳೆಂದು ಪರಿಗಣಿಸುವಂತೆ ಪರಿಶೀಲನೆ ಮಾಡುತ್ತೀರಾ?

ಶ್ರೀ ವಿ. ಎಲ್. ಪಾಟೀಲ್.—ಪರಿಶೀಲಿಸುತ್ತೇನೆ.

ಶ್ರೀ ಕೆ. ಚೆನ್ನಬಸವನಗೌಡ.—೧೮೬೨ರ ಇನಾಂ ರದ್ದಿಯಾತಿ ಕಾಯಿದೆಗಳ ಅನ್ವಯ ಫಾರಂ ೧ ಅನ್ನು ಹಾಕುವ ಬಗ್ಗೆ ರಿಯಾಯಿತಿ ತೋರಿಸಿದ್ದರು. ಆದರಂತೆ ಈಗ ಇದನ್ನು ಫಿಲಆಪ್ ಮಾಡುವುದು ಅನಾವಶ್ಯಕ ಎಂದು ನನಗೆ ತೋರುತ್ತದೆ. ಆದರ ಬಗ್ಗೆ ಸರ್ಕಾರ ಆದಷ್ಟು ಬೇಗನೆ ತೀರ್ಮಾನ ತೆಗೆದುಕೊಂಡು ಇದನ್ನು ಎಕ್ಸಿಮ್ಪ್ಟ್ ಮಾಡುವ ಹಾಗೆ ಪರಿಶೀಲನೆ ಮಾಡುತ್ತೀರಾ?

ಶ್ರೀ ವಿ. ಎಲ್. ಪಾಟೀಲ್.—ಪರಿಶೀಲನೆ ಮಾಡುತ್ತೇನೆ.